1	2
50	GHPS, RAILWAY KARIYAGARA MYSORE
51	GLPS, NEW ETTIGE GUDU MYSORE
52	GUHPS, RAHAMANYA MYSORE
53	GHPS, KURUBAARAHALI MYSORE
54	GLPS (TAMIL) SHIVARAM PET MYSORE
55	GLPS, JAYANAGAR, MYSORE

ರಾಜ್ಯದಲ್ಲಿ ಹೊಸದಾಗಿ ಟಿ ಸಿ ಹೆಚ್ ಕಾಲೇಜುಗಳ (ಡಿ ಇಡಿ) ಮಂಜೂರಾತಿ

187 (509) ಶ್ರೀ ಸಿಂಧ್ಯಾ ಪಿ ಜಿ ಆರ್ (ಕನಕಪುರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಸಕ್ತ ವರ್ಷದಲ್ಲಿ ಹೊಸದಾಗಿ ಎಷ್ಟು ಟಿ ಸಿ ಹೆಚ್ ಕಾಲೇಜುಗಳನ್ನು (ಡಿ ಇಡಿ) ಮಂಜೂರು ಮಾಡಲಾಗಿದೆ ಜಿಲ್ಲಾವಾರು ವಿವರಗಳನ್ನು ಕೊಡುವುದು

ಆ) ಈ ಕಾಲೇಜುಗಳ ಮಂಜೂರಾತಿಗೆ ಸರ್ಕಾರ ಹಾಕಿಕೊಂಡಿರುವ ಮಾನದಂಡಗಳೇನು?

ಪ್ರೊ॥ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) 630 (ಸಿ ಪಿ ಇಡಿ ಮತ್ತು ಡಿ ಇಡಿ ಕಾಲೇಜುಗಳು ಸೇರಿದಂತೆ) (ಜಿಲ್ಲಾವಾರು ಮಾಹಿತಿ ತಕ್ಷಣಕ್ಕೆ ಲಭ್ಯವಿರುವುದಿಲ್ಲ)

ಆ) ಎನ್.ಸಿ ಟಿ ಇ ಮಾರ್ಗಸೂಚಿಗಳ ಪ್ರಕಾರ ಶಿಕ್ಷಕರ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ಎನ್ ಓ ಸಿ.ಗಳನ್ನು ಮಂಜೂರು ಮಾಡಲಾಗಿದೆ ಎನ್ ಓ ಸಿ ಗಳನ್ನು ಪಡೆದ ಸಂಸ್ಥೆಗಳು ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಪೂರ್ವದಲ್ಲಿ ಎನ್ ಸಿ ಟಿ ಇ ಸಂಸ್ಥೆ ಅದರ ನಾರ್ಮ್ಸ್ ಅಂಡ್ ಸ್ಟಾಂಡರ್ಡ್ಸ್ ಪೂರೈಕೆಯ ಬಗ್ಗೆ ಪ್ರತಿ ಸಂಸ್ಥೆಯ ಪ್ರಕರಣದಲ್ಲೂ ಪರಿಶೀಲಿಸುತ್ತದೆ

ರಾಜ್ಯದಲ್ಲಿ ಹೊಸದಾಗಿ ಬಿ ಇಡಿ ಕಾಲೇಜುಗಳ ಮಂಜೂರಾತಿ

189 (511) ಶ್ರೀ ಸಿಂಧ್ಯ ಪಿ ಜಿ ಆರ್ (ಕನಕಪುರ) ಮಾನ್ಯ ಉನ್ನತ ಶಿಕ್ಷಣ ಮತ್ತು ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಸಕ್ತ ವರ್ಷದಲ್ಲಿ ಹೊಸದಾಗಿ ಎಷ್ಟು ಬಿ ಇಡಿ ಕಾಲೇಜುಗಳನ್ನು ಮಂಜೂರು ಮಾಡಲಾಗಿದೆ, ಜಿಲ್ಲಾವಾರು ವಿವರಗಳನ್ನು ಕೊಡುವುದು,

ಆ) ಈ ಕಾಲೇಜುಗಳ ಮಂಜೂರಾತಿಗೆ ಸರ್ಕಾರ ಹಾಕಿಕೊಂಡಿರುವ ಮಾನದಂಡಗಳೇನು (ವಿವರಗಳನ್ನು ಕೊಡುವುದು)?

ಪ್ರೊ॥ ಜಿ ಪರಮೇಶ್ವರ್ (ಉನ್ನತ ಶಿಕ್ಷಣ ಮತ್ತು ವಾರ್ತಾ ಸಚಿವರು)

ಅ) 270

ಜಿಲ್ಲಾವಾರು ವಿವರಗಳು ಅನುಬಂಧದಲ್ಲಿವೆ

ಆ) ವಿಶ್ವವಿದ್ಯಾಲಯಗಳಲ್ಲಿ ಸ್ವೀಕೃತಗೊಂಡ ಅರ್ಜಿಗಳ ಮೇಲೆ ವಿಶ್ವವಿದ್ಯಾಲಯಗಳ ಶಿಫಾರಸ್ಸನ್ನು ಆಧರಿಸಿ ಸರ್ಕಾರವು ಅನುಮತಿ ನೀಡಿದೆ